ಶ್ರೀ ಎಸ್. ಎಸ್. ಪಾಟೀಲ್ : ಮೊದಲು ನಮ್ಮ ಕಡೆಗೂ ಈ ಹಂದಿಗಳ ಕಾಟ ಬಹಳ ಇತ್ತು. ಆದರೆ ಕಾಲರ ಬಂದು ಎಲ್ಲಾ ಸತ್ತು ಹೋದವು. ಆಗ ನಮ್ಮ ಕಡೆ ಜನ ಮಾತನಾಡುತ್ತಿದ್ದರು, ಅವು ಕೂಡ ಅಡವಿ ಹಂದಿಗಳೇ ಅವನ್ನು ನಾವೇ ಕಾಯುತ್ತಿದ್ದೆವು ಸರ್ಕಾರ ಬಂದು ಕಾಯಬೇಕು ಎಂದು ಏನು ಇರಲಿಲ್ಲ. ನಮ್ಮ ಜಮೀನುಗಳನ್ನು ನಾವು ಕಾಯುತ್ತಿದ್ದೆವು. ನಾನು ಕೂಡ ಹಂದಿಗಳನ್ನು ಕಾಯಲಿಕ್ಕೆ ಹೋಗುತ್ತಿದ್ದೆ. ಆಗ ನಮ್ಮ ಹಿರಿಯರು ಹೇಳುತ್ತಿದ್ದರು ಹೊಲವನ್ನೆಲ್ಲಾ ಹಂದಿ ಹೆಚ್ಚು ತಿಂದ ಹಾಗೆ ಕಂಡರೂ ಹೆಚ್ಚು ಬೆಳೆ ಬರುತ್ತದೆ ಎಂದು ಹೇಳುತ್ತಿದ್ದರು. ಹಂದಿಗಳು ಕಡಿಮೆ ಆದ ಮೇಲೆ ಬೆಳೆ ಕಡಿಮೆ ಆಯ್ತು ಎಂದು ಹೇಳುತ್ತಿದ್ದರು. ರೈತರು ಇರುವುದೇ ಕಾಡು ಪ್ರಾಣಿಗಳಿಂದ ಕಾಳುಗಳನ್ನು ಕಾಪಾಡುವುದಕ್ಕೆ, ಅವರು ಅದನ್ನು ಕಾಯಬೇಕು.

ಶ್ರೀ ಎಂ. ಬಸಪ್ಪ : ಒಬ್ಬ ಬಡವ ಇರುತ್ತಾನೆ ಅವನು ಎರಡು ಎಕರೆ ಜಮೀನಿನಲ್ಲಿ ಬೆಳೆ ಬೆಳೆದಿರುತ್ತಾನೆ. ಅವನು ರಾತ್ರಿಯೆಲ್ಲಾ ಹೇಗೆ ಕಾಯುವುದಕ್ಕೆ ಆಗುತ್ತದೆ?

ಅಧ್ಯಕ್ಷರು : ಇದು ಸ್ಥಳೀಯವಾದ ಪ್ರಶ್ನೆ, ನಿಮ್ಮ ಸಮಸ್ಯೆಗೆ ಅವರು ಸ್ಪಂದಿಸಿರುತ್ತಾರೆ. ನಾನು ಈಗ ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈಗ ಸದ್ಯಕ್ಕೆ ಹಂದಿಗಳದ್ದು ಎಲ್ಲಾ ಮುಗಿಸಿ ಆಮೇಲೆ ಮುಂದಕ್ಕೆ ಹೋಗೋಣ.

ಹಿರೇಕೆರೂರು ತಾಲ್ಲೂಕು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರು

548 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವೈದ್ಯರನ್ನು ತುಂಬಲು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದೇ?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಕ್ರಮ ಕೈಗೊಳ್ಳಲಾಗುವುದು.

10.40 ಎ.ಎಂ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸುಮಾರು ಒಂದೂವರೆ ವರ್ಷಗಳಿಂದ ಅಲ್ಲಿ ವೈದ್ಯರಿಲ್ಲ. ಈಗಲಾದರೂ ಸರ್ಕಾರ ಎಚ್ಚೆತ್ತು, ಇಷ್ಟು ದಿವಸಗಳಲ್ಲಿ ವೈದ್ಯರನ್ನು ಅಲ್ಲಿ ಹಾಕುತ್ತೇವೆ ಎಂದು ಉತ್ತರದಲ್ಲಿ ಭರವಸೆ ಕೊಟ್ಟಿದ್ದರೆ ಸರಿಯಾಗುತ್ತಿತ್ತು. ಒಂದೂವರೆ ವರ್ಷದಿಂದ ಈ ಕುಡಪಲಿ ದವಾಖಾನೆಯಲ್ಲಿ ವೈದ್ಯರಿಲ್ಲ. ತಾಲ್ಲೂಕು ಕೇಂದ್ರವಾದಂಥ ಹಿರೇಕೆರೂರಿನಲ್ಲಿ ಇಬ್ಬರು ವೈದ್ಯರಿಲ್ಲ ಮತ್ತು ಒಬ್ಬರು ಮಹಿಳಾ ವೈದ್ಯರಿಲ್ಲ ಕಳೆದ ವಿಧಾನಸಭಾ

ಅಧಿವೇಶನದಲ್ಲಿ, ಕೆ.ಪಿ.ಎಸ್.ಸಿ.ಯಿಂದ ನೇಮಕವಾದ ಕೂಡಲೇ ವೈದ್ಯರ ನೇಮಕಾತಿಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಈಗಲಾದರೂ ಮಾನ್ಯ ಸಚಿವರು, ಎಷ್ಟು ದಿವಸದಲ್ಲಿ ಖಾಲಿ ಇರುವಂಥ ಹುದ್ದೆಗಳಿಗೆ ನೇಮಕ ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ ಮಂಜೂರಾದಂಥ ವೈದ್ಯರ ಹುದ್ದೆಗಳು ಒಟ್ಟು 17. ಅದರಲ್ಲಿ ಒಂದೇ ಒಂದು ಹುದ್ದೆ ಖಾಲಿಯಿರ -ತಕ್ಕಂಥಾದ್ದು. ಉಳಿದ 16 ಹುದ್ದೆಗಳನ್ನು ತುಂಬಿದ್ದೇವೆ. ಅವರು ಅಲ್ಲಿಗೆ ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕಾಗಿದೆ. ಎಲ್ಲಿ ವೈದ್ಯರ ನೇಮಕವಾಗಿದೆ, ಅವರು ಅಲ್ಲಿಗೆ ಹೋಗದೆ, ಅಲ್ಲಿ ಇಲ್ಲಿ ಕುಳಿತುಕೊಂಡು ಒತ್ತಡ ತರತಕ್ಕಂಥ ವೈದ್ಯರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮಕೈಗೊಳ್ಳುತ್ತದೆ. ಈಗ ಅವರು ಹೇಳಿರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕುಡಪಲಿ ಪಿ.ಹೆಚ್.ಸಿ.ಗೆ ಒಬ್ಬ ಗುತ್ತಿಗೆ ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆ. ಅವರು ಇನ್ನೂ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿಲ್ಲ. ಮಾಡಿಕೊಳ್ಳಲಿಲ್ಲ ಎಂದರೆ ತಕ್ಷಣ ನಾನು ಅದನ್ನು ತಿಳಿದುಕೊಂಡು ವ್ಯವಸ್ಥೆ ಮಾಡುತ್ತೇನೆ. 17 ಹುದ್ದೆಗಳಲ್ಲಿ 1 ಖಾಲಿ ಇದೆ.

ಅಧ್ಯಕ್ಷರು : ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ ಬಂದಿರುವ ಅಭ್ಯರ್ಥಿಗಳಿಗೆ ಪೋಸ್ಟಿಂಗ್ಸ್ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ನಾನೂ ತರಿಸಿ ನೋಡಿದ್ದೇನೆ. ಆ ವಿಚಾರದಲ್ಲಿ ಮಾಡಿಕೊಡುತ್ತಾರೆ.

ಶ್ರೀ ಯು. ಬಿ. ಬಣಕಾರ್ : ಬಹಳಷ್ಟು ಜನ ಇನ್‌ಫ್ಲುಯನ್ಸ್ ತೆಗೆದುಕೊಂಡು ತಮ್ಮ ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಲು ಇಲ್ಲಿ ನಡೆಸಿದ್ದಾರೆ. ದಯವಿಟ್ಟು ಅದಕ್ಕೆ ಯೀಲ್ಡ್ ಆಗಬಾರದು.

ಅಧ್ಯಕ್ಷರು : ಈಗ ರಿಪೋರ್ಟ್ ಆಗದಿದ್ದರೆ ಅವರನ್ನು ಡಿಸ್‌ಮಿಸ್ ಮಾಡುವುದೇ, ಅಥವ ಅವರನ್ನು ತಗೆಯುವುದೇ. ಹಾಗೆ ತೀರ್ಮಾನಕ್ಕೆ ಬರಲಾಗಿದೆ. ರಿಪೋರ್ಟ್ ಮಾಡಿಕೊಳ್ಳಲು ಬಹುಶಃ ನಾಳೆಯೋ ನಾಡಿದ್ದೋ ಲಾಸ್ಟ್ ಡೇಟ್ ಇರಬೇಕು. ಏನು ಆಗುತ್ತದೋ, ನೋಡೋಣ.

ಸ್ವಸ್ತಿ ಗ್ರಾಮ ಯೋಜನೆ

549 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ನವೀನ ಯೋಜನೆಯಾದ ಸ್ವಸ್ತಿ ಗ್ರಾಮ ಯೋಜನೆ ಎಂದಿನಿಂದ ಜಾರಿಗೊಳಿಸಲಾಗುವುದು?

ಆ) ಈ ಯೋಜನೆಯ ಮುಖ್ಯ ಕಾರ್ಯಕ್ರಮಗಳೇನು?

ಇ) ಈ ಯೋಜನೆಗೆ ಈ ವರ್ಷ ನಿಗದಿ ಪಡಿಸಿದ ಹಣವೆಷ್ಟು?

ಈ) ಈ ಯೋಜನೆಯ ಲಾಭ ಯಾರಿಗೆ ದೊರಕುತ್ತದೆ? (ವಿವರಗಳನ್ನು ಒದಗಿಸುವುದು).